# ವಿಶ್ವನಂದಿನಿ ಲೇಖನಮಾಲೆ — 41

## ದೇವರು ಜೀವರಿಗೇಕೆ ಬುದ್ಧಿ ನೀಡಿದ?

ಶ್ರೀಮತಿ ಸುರಭಿ ಕೃಷ್ಣ ಅವರು ಒಂದು ಮಹತ್ತ್ವದ ಪ್ರಶ್ನೆಯನ್ನು ಕೇಳಿದ್ದಾರೆ.

--------------

ಅನಾದಿ ಕಾಲದಿಂದ ಅನಂತಕಾಲದವರೆಗೆ (ಅಥವಾ ಸೃಷ್ಟಿಯಿಂದ ಮುಕ್ತಿಯವರೆಗೆ, ಮುಕ್ತಿಯಲ್ಲಿಯೂ)  ನಾವು ಹೀಗೆ ಬದುಕಬೇಕು, ನಡೆಯುತ್ತೇವೆ ಎನ್ನುವದು ನಿರ್ಣಯವಾಗಿಬಿಟ್ಟಿದೆ ಎಂದಾದ ಬಳಿಕ, ಜೀವನಿಗೆ ಇದು ಸರಿ, ಇದು ತಪ್ಪು ಎಂದು ನಿರ್ಣಯ ಮಾಡುವ ಬುದ್ಧಿಯನ್ನೇಕೆ ಭಗವಂತ ನೀಡಿದ?

**ನರಚಿತ್ತಕ್ಕೆ ಬಂದದ್ದು ಲವಲೇಶ ನಡೆಯದು ಎಂದಾದ ಬಳಿಕ, ಹರಿಚಿತ್ತವೇ ಸತ್ಯ ಎಂದಾದ ಬಳಿಕ ನರನಿಗೆ ಇದು ಸರಿ ಇದು ತಪ್ಪು ಎಂದು ನಿರ್ಣಯ ಮಾಡುವ ಬುದ್ಧಿಯನ್ನಾದರೂ ಯಾಕೆ ನೀಡಿದ ದೇವರು ? ವ್ಯರ್ಥವಲ್ಲವೇ?**

---------------

ಶಾಸ್ತ್ರಪ್ರಪಂಚದಲ್ಲಿ ತುಂಬ ಮಹತ್ತ್ವವನ್ನು ಪಡೆದಿರುವ ಪ್ರಶ್ನೆಯಿದು. ಬ್ರಹ್ಮಸೂತ್ರಗಳಿಂದ ಆರಂಭಿಸಿ ಎಲ್ಲ ಪುರಾಣಗಳಲ್ಲಿ ಇದರ ಕುರಿತು ಚರ್ಚೆಯಿದೆ. ಸ್ವಯಂ ಭೀಮಸೇನದೇವರು, ದ್ರೌಪದೀ ದೇವಿ ಇದಕ್ಕೆ ಉತ್ತರವನ್ನು ನೀಡಿದ್ದಾರೆ.

ಉತ್ತರ ತುಂಬ ಸರಳವಿದೆ. ಆದರೆ, ನಾವು ಅದನ್ನು ಅರ್ಥ ಮಾಡಿಕೊಳ್ಳುವಾಗ ಗಂಟಾಗಿಸುತ್ತೇವೆ.

ಪಾಂಡವರು ವನವಾಸ ಆರಂಭಿಸಿ ಒಂದು ವರ್ಷವಾದ ಬಳಿಕ ಧರ್ಮರಾಜನಿಗೂ ದ್ರೌಪದಿಗೂ ಈ ವಿಷಯದಲ್ಲಿ ಸಂವಾದ ನಡೆಯುತ್ತದೆ. ದ್ರೌಪದಿ ಹೇಳಿದ ಮಾತನ್ನು ಧರ್ಮರಾಜ ಒಪ್ಪದಿದ್ದಾಗ ಮಧ್ಯದಲ್ಲಿ ಭೀಮಸೇನ ಪ್ರವೇಶಿಸಿ ತತ್ತ್ವವನ್ನು ಧರ್ಮರಾಜನಿಗೆ ಮನಗಾಣಿಸುತ್ತಾನೆ.

ಇದು ಜೀವಕರ್ತೃತ್ವದ ಚರ್ಚೆಗೆ ನೇರವಾಗಿ ಸಂಬಂಧಿಸಿದ್ದು. ಆದರೆ, ಶ್ರೀಮತೀ ಸುರಭಿಯವರು ಕೇಳಿದ ಪ್ರಶ್ನೆಗೆ ಸಂಬಂಧಿಸಿದಷ್ಟನ್ನು ಮಾತ್ರ ಇಲ್ಲಿ ವಿವರಿಸುತ್ತೇನೆ. ಜೀವಕರ್ತೃತ್ವದ ಕುರಿತು ನಮ್ಮ ಶ್ರೀ ಕನಕದಾಸರು ಶ್ರೀಹರಿಭಕ್ತಿಸಾರದಲ್ಲಿ

ಅದ್ಭುತವಾದ, ಮನಸ್ಸಿಗೆ ತಕ್ಷಣದಲ್ಲಿ ನಾಟುವ ವಿವರಣೆಯನ್ನು ನೀಡಿದ್ದಾರೆ. ಆ ಸಂದರ್ಭದಲ್ಲಿ ವಿಸ್ತಾರವಾಗಿ ವಿವೇಚಿಸುತ್ತೇನೆ.

**ಪ್ರಶ್ನೆ ಹೀಗಿದೆ — ಜೀವ ಯಾವಾಗ ಸೃಷ್ಟಿಗೆ ಬರಬೇಕು, ಹೇಗೆ ಬದುಕಬೇಕು, ಹೇಗೆ ಸಾಧನೆ ಮಾಡಬೇಕು, ಹೇಗೆ ಮುಕ್ತಿಯನ್ನು ಪಡೆಯಬೇಕು, ಮುಕ್ತಿಯಲ್ಲಿ ಎಷ್ಟು ಆನಂದವನ್ನು ಅನುಭವಿಸಬೇಕು, ಹೇಗೆ ಅನುಭವಿಸಬೇಕು ಎನ್ನುವದೆಲ್ಲವೂ ಮೊದಲೇ ನಿರ್ಣೀತವಾಗಿದೆ ಎಂದು ಶಾಸ್ತ್ರ ತಿಳಿಸುತ್ತದೆ. ಅಂದಮೇಲೆ ಇದರಲ್ಲಿ ಜೀವನ ಪಾತ್ರವೇನು? ಜೀವನಿಗಿರುವ ಬೌದ್ಧಿಕಸಾಮರ್ಥ್ಯದ (ವಿವೇಕ, ತಿಳುವಳಿಕೆ ಮುಂತಾದವು) ಪ್ರಯೋಜನವೇನು?**

ನಾನು ಹಿಂದೆ ಹೇಳಿದಂತೆ ಉತ್ತರ ತುಂಬ ಸರಳವಿದೆ. ಆದರೆ ಅದನ್ನು ನಾವು ಅರ್ಥ ಮಾಡಿಕೊಳ್ಳಬೇಕಾದರೆ ತಪ್ಪು ಮಾಡುತ್ತೇವೆ.

ಒಂದು ಉದಾಹರಣೆ ನೀಡುತ್ತೇನೆ. ಅದು ಸರಿಯಾಗಿ ಅರ್ಥವಾದರೆ ಇಡಿಯ ತತ್ವ ಸರಿಯಾಗಿ ಅರ್ಥವಾಗುತ್ತದೆ.

ನೋಡಿ, ನಿಮಗೆಲ್ಲರಿಗೂ ತಿಳಿದಂತೆ ನಮ್ಮ ಬದುಕು ತೆರೆಯ ಮೇಲೆ ನಡೆಯುತ್ತಿರುವ ನಾಟಕದಂತೆ. ಸೂತ್ರಧಾರ ಎಲ್ಲ ಸಂಭಾಷಣೆಗಳನ್ನೂ, ಪ್ರಸಂಗಗಳನ್ನೂ ನಿರ್ಣಯಿಸಿದ್ದಾನೆ. ಅದರಂತೆ ನಾಟಕ ನಡೆಯುತ್ತಿದೆ.

ಆದರೆ, ತೆರೆಯ ಮೇಲೆ ನಡೆಯುವ ನಾಟಕಕ್ಕೂ, ನಮ್ಮ ಜೀವನಕ್ಕೂ ಒಂದು ಮಹತ್ತ್ವದ ವ್ಯತ್ಯಾಸವಿದೆ. ರಂಗಸ್ಥಳದ ಮೇಲೆ ನಾಟಕ ನಡೆಯುವಾಗ ಸೂತ್ರಧಾರ ಪಾತ್ರಧಾರಿಗಳಿಗೆ ಕಥೆಯನ್ನು ವಿವರಿಸಿ, ಸಂಭಾಷಣೆಯನ್ನು ಹೇಳಿಕೊಟ್ಟಿರುತ್ತಾನೆ. ಪಾತ್ರಧಾರಿಗಳಿಗೆ ತನ್ನ ಜೊತೆಯ ಪಾತ್ರಧಾರಿಗಳು ಆಡುವ ಮಾತು, ಹಿಂದಿನ ಸಂಗೀತ, ಮುಂದಿನ ಸನ್ನಿವೇಶ ಘಟನೆ ಎಲ್ಲವೂ ತಿಳಿದಿರುತ್ತದೆ. ಹೀಗಾಗಿ ಅವರು ಯಂತ್ರದ ಬೊಂಬೆಗಳಂತೆ ತಮಗೆ ಹೇಳಿಕೊಟ್ಟದ್ದನ್ನು ಮಾತ್ರ ಮಾಡುತ್ತಾರೆ.

**ಜೀವನದ ನಾಟಕದಲ್ಲಿ ಹಾಗಿಲ್ಲ. ನಮಗೆ ಮುಂದಿನ ಘಟನೆಗಳು ಗೊತ್ತಿಲ್ಲ. ಹೇಳಬೇಕಾದ ಸಂಭಾಷಣೆಗಳು ತಿಳಿದಿಲ್ಲ. ನಡೆಯುವ ಸನ್ನಿವೇಶಗಳ ಬಗ್ಗೆ ತಿಳುವಳಿಕೆಯಿಲ್ಲ. ಆದರೂ ನಾವು ಪಾತ್ರಧಾರಿಗಳು. ಪಾತ್ರ ಮಾಡಲೇಬೇಕು. ನಡೆಯುವ ಸನ್ನಿವೇಶ ಗೊತ್ತಿರುವದು ಶ್ರೀಹರಿಗೆ ಮಾತ್ರ. ನಾಟಕದ ಪೂರ್ಣ ಪರಿಚಯವಿರುವದು ಆ ಜಗನ್ನಾಟಕಸೂತ್ರಧಾರಿಗೆ ಮಾತ್ರ.**

**ಮುಂದಿನ ಸನ್ನಿವೇಶವೇ ಗೊತ್ತಿಲ್ಲದೆ, ಸಂಭಾಷಣೆಯೇ ತಿಳಿಯದೇ ನಾವು ಪಾತ್ರ ಮಾಡಲೇಬೇಕು. ಹೇಗೆ ಮಾಡುವದು? ಅದಕ್ಕೆ ಶ್ರೀಹರಿ ನಮಗೆ ಬುದ್ಧಿ ಎನ್ನುವ ವಸ್ತುವನ್ನು ನೀಡಿದ. ವಿವೇಕವನ್ನು ನೀಡಿದ. ನಮಗಿರುವ ಆ ಬುದ್ಧಿಯನ್ನು ಉಪಯೋಗಿಸಿ, ವಿವೇಕವನ್ನು ಉಪಯೋಗಿಸಿಯೇ ನಾವು ಮಾತನಾಡಬೇಕು.**

ನೀವು ಉದಾಹರಣೆಯನ್ನು ಸರಿಯಾಗಿ ಗ್ರಹಿಸಿದ್ದಲ್ಲಿ ಈಗಾಗಲೇ ಉತ್ತರ ದೊರೆತುಬಿಟ್ಟಿರುತ್ತದೆ. ಆದರೂ ಮತ್ತಷ್ಟು ವಿವರಿಸುತ್ತೇನೆ.

ನೋಡಿ, ನಾಟಕದಲ್ಲಿ ಕೊಲೆ ನಡೆಯುತ್ತದೆ. ಅದು ನಾಟಕದ ಕೊಲೆ. ಅಲ್ಲಿ ಪಾತ್ರಧಾರಿ ಸಾಯುವದಿಲ್ಲ. ಅಲ್ಲಿ ನಿಜವಾದ ಸುಖದುಃಖವಿಲ್ಲ. ಆದರೆ, ಜೀವನದಲ್ಲಿ ನಿಜವಾದ ಸುಖದುಃಖವಿದೆ.

ಒಂದು ಘಟನೆಯನ್ನು ಊಹಿಸಿ. ಗೋವಿಂದರಾಯನಿಗೆ ಒಬ್ಬರ ಮದುವೆಗೆ ಹೋಗಬೇಕಾಗಿದೆ. ಉಳಿದವರಿಗಿಂತ ಸ್ವಲ್ಪ ಬೇಗನೇ ಹೋಗುವ ಆಸೆಯೋ, ಅನಿವಾರ್ಯತೆಯೋ ಇದೆ. ಗೋವಿಂದರಾಯ ಅದಕ್ಕಾಗಿ ತಯಾರಿ ಮಾಡಿಕೊಂಡು ಬೇಗ ಹೊರಡುತ್ತಾನೆ. ಅವರು ಮನೆಯಿಂದ ಹೊರ ಬಂದು ಕಾರನ್ನು ನಡೆಸುತ್ತಾ ಮುಖ್ಯರಸ್ತೆಗೆ ತಿರುಗಿಸಿದ, ಮತ್ತೊಂದು ವಾಹನ ಧಡಕ್ಕನೇ ಬಂದು ಅವನ ಕಾರಿಗೆ ಅಪ್ಪಳಿಸಿತು. ಗೋವಿಂದರಾಯ ಸತ್ತುಬಿದ್ದ.

ಇಲ್ಲಿ ಗೋವಿಂದರಾಯನ ಸಾವು ಖಚಿತ. ಅದು ಆ ಸಮಯಕ್ಕೆ ಆಗಬೇಕು ಎನ್ನುವದು ನಿಶ್ಚಿತ. ಆತ ಒಂದು ನಿಮಿಷ ತಡವಾಗಿ ಹೊರಟಿದ್ದರೂ, ಒಂದು ನಿಮಿಷ ಬೇಗನೇ ಹೊರಟಿದ್ದರೂ ಆ ಅಪಘಾತ

ನಡೆಯುತ್ತಿರಲಿಲ್ಲ. ಆದರೆ, ಹಾಗೆ ನಡೆಯುವದಿಲ್ಲ. ಎಲ್ಲವೂ ಸರಿಯಾದ ಸಮಯಕ್ಕೆ ನಡೆಯುತ್ತದೆ.

ಗೋವಿಂದರಾಯ ಸಂತೋಷದಿಂದ ಮದುವೆಗೆ ಹೊರಟಿದ್ದಾನೆ. ತನ್ನ ಸುಖಕ್ಕಾಗಿ ಹೊರಟಿದ್ದಾನೆ. ಅವನಿಗೆ ಸಾವಿದೆ ಎಂದು ಗೊತ್ತಿದ್ದರೆ ಅವನು ಮನೆ ಬಿಡುತ್ತಿದ್ದನೇ? ಅಪಘಾತವಾಗುತ್ತದೆ ಎಂದು ಗೊತ್ತಿದ್ದರೆ ಕಾರು ಹತ್ತುತ್ತಿದ್ದನೇ? ಇಲ್ಲ. ಬಂದು ಗುದ್ದಿದ ಮತ್ತೊಂದು ವಾಹನದ ಚಾಲಕನಿಗೆ ತನ್ನಿಂದ ಅಪಘಾತವಾಗುತ್ತದೆ ಎಂದು ಗೊತ್ತಿದ್ದರೆ ವಾಹನವೇರುತ್ತಿದ್ದನೇ?

**ಅಂದಮೇಲೆ, ಆ ಜಗನ್ನಾಟಕಸೂತ್ರಧಾರ ಮೊದಲೇ ಎಲ್ಲವನ್ನೂ ಹೇಳಿದರೆ ನಾಟಕವೇ ನಡೆಯುವದಿಲ್ಲ. ಕಾರಣ ಈ ಜೀವನನಾಟಕದ ಘಟನೆಗಳು ಸತ್ಯ. ಸುಖ ದುಃಖಗಳು ಸತ್ಯ.** ಆದ್ದರಿಂದ ಆ ಸೂತ್ರಧಾರ ಎಲ್ಲವನ್ನೂ ನಿರ್ಣಯಿಸಿದ್ದಾನೆ. ಅದರಂತೆಯೇ ನಡೆಯಬೇಕು, ನಡೆಯುತ್ತದೆ. ಅದು ನಡೆಯಬೇಕೆಂದೇ ಅವನು ಈ ರೀತಿ ನಮಗೆ ಹೇಳದಂತೆ, ನಮಗೆ ಬುದ್ಧಿ ಎನ್ನುವ

ವಸ್ತುವನ್ನು ನೀಡಿ ಆ ಮುಖಾಂತರ ನಾಟಕ ನಡೆಸುತ್ತಾನೆ.

ಈ ತತ್ವವನ್ನು ನಾವು ಅರ್ಥ ಮಾಡಿಕೊಳ್ಳುವಾಗ ಎಡವುವದು ಎಲ್ಲಿ ಎಂದು ವಿವರಿಸುತ್ತೇನೆ, ಗಮನಿಸಿ.

ಈ ನಾಟಕ ಹೀಗೆ ನಡೆಯಬೇಕು ಎಂದು ತಿಳಿದಿರುವದು ಶ್ರೀಹರಿಗೆ, ಅವನ ಆಪ್ತಸಚಿವನಾದ ಮುಖ್ಯಪ್ರಾಣನಿಗೆ, ದೇವತೆಗಳಿಗೆ ಮಾತ್ರ. ನಮಗಲ್ಲ. ನಮಗೆ ಎಲ್ಲವನ್ನೂ ತಿಳಿಸಿ ಆ ಬಳಿಕ ನಮಗೆ ವಿವೇಕನನ್ನು ಬುದ್ಧಿಯನ್ನು ನೀಡಿದ್ದರೆ ಆಗ ಪ್ರಶ್ನೆ ಮಾಡಬಹುದಾಗಿತ್ತು. Director ಹೇಳಿದ ಹಾಗೆ ನಟಿಸಬೇಕಾದ ನಟ ತನ್ನ ಸ್ವಂತ ಬುದ್ಧಿಯನ್ನು ಉಪಯೋಗಿಸುವ ಆವಶ್ಯಕತೆ ಇರುವದಿಲ್ಲ. ನಮ್ಮ ಬುದ್ಧಿ, ವಿವೇಕ ಅವಿವೇಕಗಳೇ ಈ ನಾಟಕದಲ್ಲಿ ಪ್ರಧಾನ ಪಾತ್ರ ವಹಿಸುವ ಪ್ರಧಾನ ಅಂಶಗಳು. ಇದೊಂದು Reality show.

Reality show ನಲ್ಲಿ ಪಾತ್ರಧಾರಿಗಳು ನಾಟಕದ ಪಾತ್ರಧಾರಿಗಳಂತೆ ಸುಳ್ಳಾಗಿ ಅಭಿನಯಿಸುವದಿಲ್ಲ.

ಅವರ ಜಗಳಗಳು ಸತ್ಯ. ಅವರ ಸುಖ ದುಃಖಗಳು ಸತ್ಯ. ಅಲ್ಲಿ Spontanious ಆಗಿ ವರ್ತಿಸಬೇಕು (ಅಭಿನಯಿಸಬೇಕು ಎನ್ನುವ ಶಬ್ದ ಬಳಸಿಲ್ಲ, ಗಮನಿಸಿ) Reality show ಗಳ ಉದ್ದೇಶವೇನು. ಯಾವಯಾವ ಸಂದರ್ಭದಲ್ಲಿ ನೀವು ಯಾವಯಾವ ರೀತಿ ವರ್ತಿಸುತ್ತೀರಿ, ನಿಮ್ಮಲ್ಲಿ ಎಷ್ಟು ಮನುಷ್ಯತ್ವ ಅಡಗಿದೆ, ನಿಮ್ಮಲ್ಲಿ ಎಷ್ಟು ಧೈರ್ಯ ಅಡಗಿದೆ ಇತ್ಯಾದಿಯನ್ನು ತೋರಿಸುವದು.

**ಈ ಸಂಸಾರ ಎನ್ನುವದೂ ಒಂದು Reality show. ನಮ್ಮ ಸಂಗಡದವರು ಮಾಡುವ ತಪ್ಪಿನಿಂದ ನಾವು ಪಾಠ ಕಲಿಯಬೇಕು. ನಮ್ಮ ತಪ್ಪಿನಿಂದ ನಾವು ಪಾಠ ಕಲಿಯಬೇಕು. ದುರಹಂಕಾರ, ಲೋಭಗಳನ್ನು ಬಿಡಬೇಕು. ಸದ್ಗುಣಗಳನ್ನು ಮೈಗೂಡಿಸಿಕೊಳ್ಳಬೇಕು. ಮನುಷ್ಯತ್ವವನ್ನು ಮೆರೆಸಬೇಕು. ಕರುಣಾಳುವಾದ ದೇವರು ನಮ್ಮ ಅಂತರ್ಯಾಮಿಯಾಗಿದ್ದಾನೆ ಇದ್ದಾನೆ ಎನ್ನುವದನ್ನು ಅರಿಯಬೇಕು. ಅವನ ಪ್ರಾಪ್ತಿಯಾದಾಗ ನಮಗೆ ಶಾಶ್ವತ ಸುಖ ಎನ್ನುವ-ದನ್ನು ತಿಳಿಯಬೇಕು.  ಸದ್ಗುಣಗಳು, ಭಕ್ತಿ, ಜ್ಞಾನ, ವಿರಕ್ತಿಗಳು ಅವನನ್ನು ಒಲಿಸುವ ಪರಿ ಎನ್ನುವದನ್ನು**

**ಮನಗಂಡು ಅವನ್ನು ಪಡೆಯಬೇಕು. ಅವುಗಳಿಂದ ಅವನನ್ನು ಒಲಿಸಿ ಅವನನ್ನು ಪಡೆಯಬೇಕು. ಇದೇ ಈ Reality Show ದ Theme.**

ತತ್ವ ಇಷ್ಟೇ.  ದೇವರು ನಮ್ಮ ಅಂತರ್ಯಾಮಿ. ಅವನ ಕಾರುಣ್ಯದಿಂದ ನಮ್ಮ ಬವಣೆ ನೀಗುತ್ತದೆ, ಶಾಶ್ವತವಾದ ಮೋಕ್ಷ ದೊರೆಯುತ್ತದೆ. ಅವನು ಈ ಜಗತ್ತಿನ ಒಡೆಯ. ಅವನು ಹಾಕಿದ ಸಂವಿಧಾನವನ್ನು ಮೀರಿ ಬದುಕುವವರನ್ನು ಶಿಕ್ಷಿಸುವ ದೊರೆ ಅವನು. ಪಾಪ ಮಾಡಿದರೆ ಶಿಕ್ಷಿಸುತ್ತಾನೆ. ಸದ್ಗುಣಗಳನ್ನು ಮೈಗೂಡಿಸಿಕೊಂಡು ಅವನನ್ನು ಸೇವಿಸಿದರೆ ಅವನು ಒಲಿಯುತ್ತಾನೆ. ಅವನನ್ನು ಒಲಿಸಿಕೊಳ್ಳುವ ಮಾರ್ಗವನ್ನೂ ಅವನೇ ಶಾಸ್ತ್ರಗಳ ಮುಖಾಂತರ ನೀಡಿದ್ದಾನೆ. ಅವನ್ನು ಓದಿ, ಕೆಟ್ಟದ್ದನ್ನು ಬಿಟ್ಟು, ಒಳ್ಳೆಯದನ್ನು ಮಾಡುತ್ತ, ಅವನನ್ನು ಸೇವಿಸಿದರೆ ನಾವು ಈ ಆಟದಲ್ಲಿ ಉತ್ತೀರ್ಣರಾಗುತ್ತೇವೆ. ಅದರ ಗೋಜಿಗೇ ಹೋಗದೇ ಸುಮ್ಮನೇ ಹಣ ಕಾಸು ಸಾಲ ಸೋಲ ಸುಖ ದುಃಖ ಅಂತ ಇದ್ದರೆ ಇದೇ ನಾಟಕದಲ್ಲಿ ಮುಂದುವರೆಯುತ್ತಲೇ ಇರುತ್ತೇವೆ. ಇದನ್ನೂ ಮೀರಿ, ಲೋಕಕ್ಕೆ ಉಪದ್ರವ ಕೊಡುತ್ತ, ಜೊತೆಯ

ಆಟಗಾರರಾಗಿ ಹಿಂಸೆ ಕೊಡುತ್ತ ಅವನ ಸಂವಿಧಾನವನ್ನು ಮೀರಿ, ಆಟದ ನಿಯಮಗಳನ್ನು ಮೀರಿ ದುರಹಂಕಾರ ತೋರಿದರೆ ಆಟದ ಅಂಗಣದಿಂದ ನೇರವಾಗಿ ದುಃಖದ ಕಾರಾಗೃಹಕ್ಕೆ ಸೇರುತ್ತೇವೆ.

**ಭಕ್ತಿಯೂ ಮಾಡದೇ ದ್ವೇಷವೂ ಮಾಡದೇ ಕ್ರೀಡಾಂಗಣದಲ್ಲೇ ಆಡುತ್ತ ಇರುವವರೂ ಇದ್ದಾರೆ.**

**ಭಕ್ತಿ ಮಾಡಿ ಅವನನ್ನು ಒಲಿಸಿ ಆಟದಲ್ಲಿ ಗೆದ್ದು ಅವನ ಬಳಿಯೇ ಇದ್ದು ಸುಖವನ್ನು ಅನುಭವಿಸುವವರು ಇದ್ದಾರೆ.**

**ದ್ವೇಷ ಮಾಡಿ, ಜೊತೆಯ ಆಟಗಾರರಿಗೆ ಹಿಂಸೆ ನೀಡಿ ಆಟದ ನಿಯಮಗಳನ್ನು ಮೀರಿ ವರ್ತಿಸಿ ಅಂಗಣದಿಂದ ಕಾರಾಗೃಹ ಸೇರುವವರೂ ಇದ್ದಾರೆ.**

ಯಾರು ಹೇಗೆ ಆಡುತ್ತಾರೆ, ಎಲ್ಲಿಗೆ ಹೋಗುತ್ತಾರೆ ಎನ್ನುವದು ಶ್ರೀಹರಿಗೆ ಮಾತ್ರ ಗೊತ್ತಿರುವದು. ಉಳಿದವರಿಗೂ ಗೊತ್ತಿಲ್ಲ. ನಾವೆಲ್ಲಿಗೆ ಹೋಗುತ್ತೇವೆ ನಮಗೂ ಗೊತ್ತಿಲ್ಲ. ಮೂರೂ ದಾರಿಯೂ ನಮ್ಮ ಮುಂದಿದೆ. ಆರಿಸಿಕೊಳ್ಳುವ ವಿವೇಕವನ್ನು

ಪರಮಾತ್ಮ ನಮಗೆ ನೀಡಿದ್ದಾನೆ. ವಿವೇಕವನ್ನು ಉಪಯೋಗಿಸಿ ಸರಿಯಾದ ರೀತಿಯಲ್ಲಿ ಆಟವಾಡುತ್ತಿದ್ದರೆ (ಬದುಕುತ್ತಿದ್ದರೆ) ನಾವು ಉತ್ತಮರು.

ಅವಿವೇಕದಿಂದ ಪೂರ್ಣ ಒಳ್ಳೆಯದನ್ನೂ ಮಾಡದೇ, ಪೂರ್ಣ ಕೆಟ್ಟದನ್ನೂ ಮಾಡದೇ ಕೇವಲ ಸ್ವಾರ್ಥಿಗಳಾಗಿ ಆಡುತ್ತಿದ್ದರೆ ನಾವು ಮಧ್ಯಮರು.

ದುರಹಂಕಾರದಿಂದ ಇನ್ನೊಬ್ಬ ಆಟಗಾರರಿಗೆ ತೊಂದರೆ ಕೊಡುತ್ತ ಅನೀತಿಯಿಂದ ಗೆಲ್ಲಲು ಪ್ರಯತ್ನಿಸುತ್ತಿದ್ದೇವೋ ನಾವು ಅಧಮರು. ಹೀಗೆ ನಮ್ಮ ಸ್ವಭಾವ ಏನೆಂದು ನಾವು ಅರಿಯಬಹುದು.

ಹೀಗೆ, ಎಲ್ಲವೂ ನಿಶ್ಚಿತ, ಯಾರ ದೃಷ್ಟಿಯಿಂದ? ಭಗವಂತನ ದೃಷ್ಟಿಯಿಂದ. ನಾವು ದೇವರಲ್ಲವಲ್ಲ? ನಮಗೆ ಮುಂದೇನಾಗುತ್ತದೆ ಎನ್ನುವದು ಗೊತ್ತಿಲ್ಲ. ನಮ್ಮ ದೃಷ್ಟಿಯಿಂದ ಯಾವುದೂ ನಿಶ್ಚಿತವಲ್ಲ. ಮುಂದಾಗುವದು ಗೊತ್ತಿಲ್ಲ. ಹೀಗಾಗಿ ಆಟದ ನಿಯಮವನ್ನು ಅನುಸರಿಸಿ ಆಟವಾಡುವದಷ್ಟೇ ನಾವು ಮಾಡಬೇಕಾದ್ದು.

ಕನ್ನಡ ಬಾರದ ನಟಿಗೆ ಕನ್ನಡದ ಸಾಲು ಹೇಳಿಕೊಟ್ಟು ನಟನೆ ಮಾಡಿಸಬಹುದು. ಕನ್ನಡ ಬಾರದ ವ್ಯಕ್ತಿಯನ್ನು ತಂದು Reality show ನಲ್ಲಿ ಕನ್ನಡ ಮಾತಾಡು ಎಂದು ಹೇಳಬಾರದು. ಕನ್ನಡದ ಕುರಿತ reality show ನಲ್ಲಿ ಕನ್ನಡ ಬರಬೇಕಾದ್ದು ಅನಿವಾರ್ಯ. ಹಾಗೆ, ಪರಮಾತ್ಮ ನಡೆಸುವ ಈ Reality show ನಲ್ಲಿ ಬುದ್ಧಿ ವಿವೇಕಗಳು ಇರುವದು ಅನಿವಾರ್ಯ. ಅದನ್ನು ಕೊಟ್ಟು ನಮ್ಮಿಂದ ಆಟ ಆಡಿಸುತ್ತಾನೆ. ಪರಮಾತ್ಮ ನಾಟಕದಂತೆ ನಮ್ಮ ಜೀವನ ನಡೆಸಿದ್ದರೆ ಬುದ್ಧಿ ವಿವೇಕಗಳ ಆವಶ್ಯಕತೆ ಇರುತ್ತಿರಲಿಲ್ಲ.  Reality show ನಡೆಸುತ್ತಿದ್ದಾನೆಯಾದ್ದರಿಂಗ ಬುದ್ಧಿ ವಿವೇಕಗಳನ್ನು ಕೊಟ್ಟು ಸಂಸಾರದಲ್ಲಿ ಬಿಟ್ಟಿದ್ದಾನೆ.

ಇಷ್ಟೇ ವ್ಯತ್ಯಾಸ. Reality show ನಡೆಸುವ ಸೂತ್ರಧಾರನಿಗೂ ಮುಂದೇನಾಗುತ್ತದೆ ಗೊತ್ತಿರುವದಿಲ್ಲ. ಆದರೆ, ನಮ್ಮ ಜಗನ್ನಾಟಕಸೂತ್ರಧಾರಿಗೆ ಎಲ್ಲವೂ ಗೊತ್ತಿದೆ.

ಆಡಿಸುವಾತನಿಗೆ ಎಲ್ಲವೂ ಗೊತ್ತಿದೆ. ಆಡುವಾತನಿಗೆ ಗೊತ್ತಿಲ್ಲ. ನಾವು ಎಡವುವದು

ಎಲ್ಲಿ? ಆಡುವ ನಾವು, ಆಡಿಸುವವನಂತೆ ವರ್ತಿಸಿದಾಗ. ಅರ್ಥಾತ್, ಎಲ್ಲವೂ ಹೀಗೇ ಆಗಬೇಕೆಂದು ಅವನು ನಿರ್ಣಯಿಸಿದ್ದರೆ ನಮಗೆ ವಿವೇಕವನ್ನೇಕೆ ನೀಡಬೇಕಿತ್ತು ಎಂದು ಪ್ರಶ್ನಿಸಿದಾಗ. ಆದರೆ ಆಟದ ಕಾನ್ಸೆಪ್ಟೇ ಹಾಗಿದೆ. **ಸಾವಿರ ಕೀಲಿ ಕೈಗಳನ್ನು ಕೊಟ್ಟು ಒಂದು ಬೀಗವನ್ನು ತೆಗಿ ಅಂತ ದೇವರು ಬಿಟ್ಟಿದ್ದಾನೆ. ಸರಿಯಾದ ಕೀಲಿ ಕೈ ಹುಡುಕಬೇಕು ನಾವು.**

ಇನ್ನು ಆಟ ಆಡಿಸುವವನೂ ಅವನೇ, ಆಟದ ಫಲ ನೀಡುವವನೂ ಅವನೇ. ಅವನು ಯಾಕೆ ಹೀಗೆ ಮಾಡುತ್ತಾನೆ. ನಾವು ಮುಕ್ತಿ ಪಡೆಯುವದು ಸುಮ್ಮನೇ 'ಆಟ ಆಡಿಸಿ' ಏಕೆ ನೀಡಬೇಕು? ಹಾಗೇ ನೀಡಿಬಿಡಬಾರದೇ ಎಂದರೇ ಉಪನಿಷತ್ತು ಒಂದು ಅದ್ಭುತವಾದ ಉತ್ತರ ನೀಡಿದೆ — **ದೇವಸ್ಯೈಷ ಸ್ವಭಾಯೋಽಯಮ್.**

ಅವನು ದೇವ, ದೇವ ಎಂದರೆ ಆಟವಾಡುವವನು ಮತ್ತು ಆಟ ಆಡಿಸುವವನು. ಜೀವರನ್ನು ಈ ರೀತಿ ಆಟ ಆಡಿಸುವದು ಅವನ ಸ್ವಭಾವ. ಅವನ ಆಟದ ಕೈಗೊಂಬೆಗಳು ನಾವು. ಸೂತ್ರ ಹಿಡಿದ ಸೂತ್ರಧಾರ

ಅವನು. ಅವನು ಒಳಗಿನಿಂದ ಕುಣಿಸುತ್ತಾನೆ.
ನಾವು ಕುಣಿಯಬೇಕು.
ಗುರುಗಳಲ್ಲಿದ್ದು ತತ್ವ ಬೋಧಿಸುತ್ತಾನೆ. ನಾವು ತತ್ವ ತಿಳಿಯಬೇಕು.

ಪಾಪ ಯಾವುದು ಪುಣ್ಯ ಯಾವುದು ಎಂದು ತಿಳಿಸುತ್ತಾನೆ. ತಿಳಿಸಿ ಪಾಪ ಮಾಡುವ ಪುಣ್ಯ ಮಾಡುವ ಎರಡೂ ಸನ್ನಿವೇಶಗಳನ್ನು ಒದಗಿಸುತ್ತಾನೆ. ನಾವು ಪಾಪವನ್ನು ಬಿಡಬೇಕು. ಪುಣ್ಯವನ್ನು ಮಾಡಬೇಕು.

ಬಿಡಲಾಗದಿದ್ದಲ್ಲಿ ಅವನನ್ನೇ ಮೊರೆಹೋಗಬೇಕು, ಮನಸ್ಸಿಗೆ ನಿಗ್ರಹ ಕೊಡು. ನಮ್ಮ ಪ್ರಾರ್ಥನೆ ಪ್ರಾಮಾಣಿಕವಾಗಿದ್ದಲ್ಲಿ ಪರಿಶುದ್ಧವಾಗಿದ್ದಲ್ಲಿ ಪರಿಪೂರ್ಣವಾಗಿದ್ದಲ್ಲಿ ನಮ್ಮ ಪ್ರಾರ್ಥನೆಯನ್ನು ಮನ್ನಿಸುತ್ತಾನೆ. ನಮ್ಮಿಂದ ಪಾಪ ಮಾಡಿಸುವದಿಲ್ಲ. ನಮ್ಮ ಪ್ರಾರ್ಥನೆಯಲ್ಲಿ ಮೋಸವಿದ್ದರೆ, ಅಪೂರ್ಣತೆಯಿದ್ದರೆ ನಮ್ಮಿಂದ ಮತ್ತೆ ಪಾಪ ಮಾಡಿಸುತ್ತಾನೆ.

ಪಾಪ ಮಾಡಿದ ಬಳಿಕ ಮತ್ತೆ ಮೊರೆ ಹೋಗಬೇಕು, ಕ್ಷಮಿಸು ಸ್ವಾಮಿ ಎಂದು. ಮತ್ತೆ ನಮ್ಮ ಪ್ರಾರ್ಥನೆಯಲ್ಲಿ ಪ್ರಾಮಾಣಿಕತೆ ಇದ್ದರೆ ಕ್ಷಮಿಸುತ್ತಾನೆ. ಇಲ್ಲವಾ, ಪಾಪದ ಫಲವಾಗಿ ತಾಪವನ್ನು ನೀಡುತ್ತಾನೆ.

ಹೀಗೆ ಪಾಪವನ್ನು ಪರಮಾತ್ಮ ಸಹಿಸುವದಿಲ್ಲ ಎಂದು ನಿರ್ಣಯ ಮಾಡಿಕೊಂಡು ಪಾಪದಿಂದ ದೂರವಾಗಿ ಅವನನ್ನು ಒಲಿಸಲು ಪ್ರಯತ್ನಿಸಬೇಕು. ಆಗ ಪರೀಕ್ಷೆ ಆರಂಭವಾಗುತ್ತದೆ.

**ನಮ್ಮ ಮಿತ್ರರಲ್ಲಿದ್ದು ಸಹಾಯ ಬೇಡುತ್ತಾನೆ. ನಾವು ಸಹಾಯ ಮಾಡಬೇಕು.**

**ನಮ್ಮ  ಶತ್ರುಗಳಲ್ಲಿದ್ದು ನಮಗೆ ತೊಂದರೆ ಕೊಡುತ್ತಾನೆ, ಅವರನ್ನು ಮೀರಬೇಕು. ಕಷ್ಟವನ್ನು ಸಹಿಸಬೇಕು.**

**ಮಿತ್ರರಿಗೆ ಸಹಾಯ ಮಾಡುತ್ತ, ಶತ್ರುಗಳ ತಲೆಯ ಮೇಲೆ ಕಾಲನ್ನಿಟ್ಟು ಅವರನ್ನು ಕಡೆಗಣಿಸುತ್ತ, ಶಾಸ್ತ್ರಗಳ ಅಧ್ಯಯನ ಮಾಡುತ್ತ, ಅವನ ಕುರಿತೇ ಮಾತನಾಡುತ್ತ, ಅವನ ಕುರಿತೇ ಯೋಚಿಸುತ್ತ,**

**ಗಂಡನಲ್ಲಿ, ಹೆಂಡತಿಯಲ್ಲಿ, ಮಕ್ಕಳಲ್ಲಿ, ಮಿತ್ರರಲ್ಲಿ, ಶತ್ರುಗಳಲ್ಲಿ, ತಿನ್ನುವ ಅನ್ನದಲ್ಲಿ, ಕುಡಿಯುವ ನೀರಿನಲ್ಲಿ, ಹಾಕಿಕೊಳ್ಳುವ ಬಟ್ಟೆಯಲ್ಲಿ, ವಾಸವಿರುವ ಮನೆಯಲ್ಲಿ, ಒಟ್ಟಾರೆ ಇಡಿಯ ಜಗತ್ತಿನಲ್ಲಿ ಅವನನ್ನೇ ಕಾಣುತ್ತ, ಕುಂತಾಗ, ನಿಂತಾಗ, ಎದ್ದಾಗ, ಬಗ್ಗಿದಾಗ, ನಕ್ಕಾಗ, ಅತ್ತಾಗ, ತಿನ್ನುವಾಗ, ಕುಡಿಯುವಾಗ ಅವನನ್ನೇ ಸ್ಮರಿಸುವಾಗ, ಸ್ವಾಮೀ, ಈ ಸಂಸಾರ ಸಾಕು ಉದ್ಧರಿಸೋ ಒಡೆಯಾ ಎಂದು ಇಡಿಯ ಜೀವದ ಭಕ್ತಿಯಿಂದ ಮೊರೆಯಿಟ್ಟಾಗ ಆ ಕರುಣಾಳು ನಾವು ಮಾಡಿದ ಸಕಲ ಪಾಪಗಳನ್ನೂ ಮನ್ನಿಸಿ ನಮ್ಮನ್ನು ಕರೆದೊಯ್ದು, ನಮ್ಮ ಕೊಳೆಯನ್ನೆಲ್ಲ ಕಳೆದು ತನ್ನ ಲೋಕದಲ್ಲಿ ಶಾಶ್ವತವಾಗಿ ಇರಿಸುತ್ತಾನೆ.**

ಇದು ಆ ಭಗವಂತ ಆಡಿಸುವ, ನಾವು ಆಡುವ ಮುಕ್ತಿಸಂಸಾರದಾಟದ ಪರಿಚಯ.

**ಗೋಪುರದ ಭಾರವನು** ಎಂಬ ಕನಕದಾಸರ ಅದ್ಭುತ ಪದ್ಯವನ್ನು ಅರ್ಥ ಮಾಡಿಕೊಂಡಾಗ ಮೇಲೆ ಹೇಳಿದ ಮಾತುಗಳು ಮತ್ತಷ್ಟು ಸ್ಪಷ್ಟವಾಗಿ ಅರ್ಥವಾಗುತ್ತವೆ. ಶ್ರೀಮದಾಚಾರ್ಯರ

ತಾತ್ಪರ್ಯನಿರ್ಣಯದ ಇಪ್ಪತ್ತೆರಡನೆಯ ಅಧ್ಯಾಯವನ್ನು ಅಧ್ಯಯನ ಮಾಡುವಾಗ ಪೂರ್ಣ ಅರ್ಥವಾಗುತ್ತದೆ. ಗುರುಗಳ ಕಾಲ ಬಳಿ ಕುಳಿತು ನಾವು ಈ ಪ್ರಶ್ನೆ ಮಾಡಿದಾಗ ಅವರು ನಮ್ಮ ಜೀವನದ ಉದಾಹರಣೆಯನ್ನೇ ನೀಡಿ ಉತ್ತರಿಸುತ್ತಾರೆ. ಆಗ ಈ ತತ್ವದ ಸಾಕ್ಷಾತ್ಕಾರ ನಮಗಾಗುತ್ತದೆ.

**ಹಾಗೇ ಅರ್ಥವಾಗಬೇಕು, ಆಗಲೇ ಅರ್ಥವಾಗಬೇಕು ಎನ್ನುವದೂ ಸಹಿತ ಮೊದಲೇ ನಿರ್ಣೀತ. ಅರ್ಥ ಮಾಡಿಕೊಳ್ಳಲು ಪ್ರಯತ್ನ ಪಡುವದೇ ಆಟ.**

ಮೇಲೆ ಹೇಳಿದ ಎಲ್ಲವೂ ಮೇಲಿನ ಈ ಎರಡು ವಾಕ್ಯಗಳಲ್ಲಿದೆ.

ಇನ್ನೂ ಅರ್ಥವಾಗಿಲ್ಲ ಎಂತಾದಲ್ಲಿ, ಶ್ರೀ ಗುರುಭ್ಯೋನಮಃ ಎಂಬ ಪರಮಮಂಗಳ ಮಂತ್ರವನ್ನು ನೂರೆಂಟು ಬಾರಿ ಜಪಿಸಿ ಮತ್ತೊಮ್ಮ ಓದಿ. ಅರ್ಥವಾಗುತ್ತದೆ. ಆಗಲೂ ಅರ್ಥವಾಗಿಲ್ಲ ಎಂದರೆ ಅರ್ಥವಾಗುವವರೆಗೆ ಆ ದಿವ್ಯಮಂತ್ರವನ್ನು

ಜಪಿಸುತ್ತ ಓದುತ್ತಲೇ ಇರಿ. ಗುರುಗಳು, ಶ್ರೀಹರಿ ಅರ್ಥ ಮಾಡಿಸುತ್ತಾರೆ.

ಸೂಕ್ಷ್ಮವಾದ ವಿಷಯ, ದೃಢವಾಗಿ ಅರ್ಥವಾಗಲಿ ಎಂದು ಪುನಃಪುನಃ ವಿವರಿಸಿ, ದೃಷ್ಟಾಂತಗಳನ್ನು ನೀಡಿ ತಿಳಿಸಿದ್ದೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ



# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name VISHWANANDINI**
- **Account Number 35368588017**
- **Account Type Current Account**
- **Bank State Bank of India**
- **Branch T. Narasipura, Mysore**
- **IFSC SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, "Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491